**ದಿನಾಂಕಃ22-11-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಎನ್.ಎಸ್. ವಕೀಲರಿಂದಃ**

ನಾನು ವ್ಯವಸಾಯಗಾರನಾಗಿದ್ದೇನೆ. ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಬೇಕು ಎಂದು ನನಗೆ ವಾದಿ ಹೇಳಿದ್ದಾನೆ. ನ್ಯಾಯಾಲಯದ ಸಮನ್ಸ್ ನನಗೆ ಪೋಸ್ಟ್‌ಮ್ಯಾನ್ ಕೊಟ್ಟಿದ್ದಾನೆ. ಸದರಿ ಸಮನ್ಸ್ ಪ್ರತಿಯನ್ನು ನಾನು ತಂದಿಲ್ಲ. ಸಮನ್ಸ್ ಬಂದ ತಕ್ಷಣ ಈ ಕೇಸಿನ ವಾದಿ ಮತ್ತು ಪ್ರತಿವಾದಿ ನಡುವೆ ದಾಖಲಾಗಿರುವ ದಾವೆಯ ವಿಚಾರ ನಾನು ತಿಳಿದುಕೊಂಡಿದ್ದೇನೆ.

**2)** ಸಮನ್ಸ್ ನನಗೆ ಜಾರಿಯಾದ ಬಳಿಕ ನಾನು ವಾದಿಯನ್ನು ಹೋಗಿ ಭೇಟಿಯಾಗಿದ್ದೇನೆ. ವಾದಿಯನ್ನು ಹೋಗಿ ಭೇಟಿಯಾಗಬೇಕು ಎಂದು ಸಮನ್ಸ್‌ನಲ್ಲಿ ಬರೆದಿಲ್ಲ. ನ್ಯಾಯಾಲಯದಿಂದ ನನಗೆ ಸಮನ್ಸ್ ಬಂದರೆ ನಾನು ನ್ಯಾಯಾಲಯಕ್ಕೆ ಬಂದು ವಿಚಾರಿಸಬೇಕು ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಬಂದು ವಿಚಾರಣೆ ಮಾಡಿಲ್ಲ ಎಂದರೆ ಸರಿ.

**3)** ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ನಮ್ಮ ವಕೀಲರು ಬರೆಸಿದ್ದಾರೆ. ನನ್ನ ವಕೀಲರ ಬಳಿ ನನ್ನನ್ನು ಯಾರು ಕರೆದುಕೊಂಡು ಹೋಗಿಲ್ಲ, ನಾನೇ ಸ್ವತಃ ಹೋಗಿದ್ದೇನೆ. ನನ್ನ ವಕೀಲರನ್ನು ತಾಲ್ಲೂಕು ಕಛೇರಿಯಲ್ಲಿ ಭೇಟಿಯಾಗಿದ್ದೇನೆ.

ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ವಿಷಯವನ್ನು ನನ್ನ ಹೇಳಿಕೆಯಂತೆ ವಕೀಲರ ಕಛೇರಿಯಲ್ಲಿ ಬರೆಯಲಾಗಿದೆ.

**4)** ಸಾಕ್ಷ್ಯ ಪ್ರಮಾಣ ಪತ್ರ ಆಂಗ್ಲ ಭಾಷೆಯಲ್ಲಿರುವ ಕಾರಣ ಅದರಲ್ಲಿರುವ ವಿಷಯ ನಿಮಗೆ ಗೊತ್ತಿದ್ದೀಯಾ ಎಂದರೆ ಸಾಕ್ಷಿಯು ತಾನು ತನ್ನ ವಕೀಲರಿಗೆ ಮಾಹಿತಿ ಕೊಟ್ಟಂತೆ ವಕೀಲರು ಸಾಕ್ಷ್ಯ ಪ್ರಮಾಣ ಪತ್ರ ತಯಾರಿಸಿ ನನಗೆ ಓದಿ ಹೇಳಿದ್ದಾರೆ, ಆದ್ದರಿಂದ ಅದರಲ್ಲಿರುವ ವಿಷಯ ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. ವಾದಿ ಕೇವಲ ಒಬ್ಬರ ಮೇಲೆ ಈ ದಾವೆ ಹೂಡಿದ್ದಾರೆ.

**5)** ಈ ಕೇಸಿನ ವಾದಿ ನನಗೆ ಸುಮಾರು 12 ರಿಂದ 15 ವರ್ಷದಿಂದ ಪರಿಚಯ. ವಾದಿಯ ಯಾವುದೇ ವ್ಯವಹಾರ ಇದ್ದರೆ ನಾನು ಸಹಿ ಮಾಡಲು ಹೋಗುತ್ತೇನೆಂದರೆ ಸಾಕ್ಷಿಯು ತಾನು ಈವರೆಗೂ ಈ ಪ್ರಕರಣ ಹೊರತುಪಡಿಸಿ ಯಾವುದೇ ವ್ಯವಹಾರಕ್ಕೆ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ ಖರೀದಿ ಕರಾರು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಲು ನನ್ನನ್ನು ಪ್ರತಿವಾದಿ ಕರೆದಿರುತ್ತಾರೆ.

**6)** ನ್ಯಾಯಾಲಯದ ಸಮನ್ಸ್ ಬಂದ ಬಳಿಕ ನಾನು ಪ್ರತಿವಾದಿಯನ್ನು ಭೇಟಿಯಾಗಿಲ್ಲ, ಕಾರಣ ಆತ ಊರಿನಲ್ಲಿ ಇರಲಿಲ್ಲ. ಪ್ರತಿವಾದಿ ಚಿಂತಾಮಣಿ ನಗರದಲ್ಲಿ ಎಲ್ಲಿ ವಾಸವಿದ್ದಾನೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ ನ್ಯಾಯಾಲಯದಲ್ಲಿ ಈಗ ಇದ್ದಾನಾ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿ

ನ್ಯಾಯಾಲಯದಲ್ಲಿರುವ ಎಲ್ಲರನ್ನು ನೋಡಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯನ್ನು ನನಗೆ ಕಳೆದ 15 ವರ್ಷದಿಂದ ಪರಿಚಯ ಇದ್ದಾನೆ. ನ್ಯಾಯಾಲಯದ ಆವರಣದ ಎಡಭಾಗದಲ್ಲಿ ಪ್ರತಿವಾದಿ ಕುಳಿತಿದ್ದಾನೆಂದು ವಕೀಲರು ತೋರಿಸಿದ ಬಳಿಕ ಸಾಕ್ಷಿ ಈಗ ಪ್ರತಿವಾದಿಯನ್ನು ಗುರ್ತಿಸಿ ಸಾಕ್ಷ್ಯ ನುಡಿಯುತ್ತಾರೆ.

**7)** ಖರೀದಿ ಕರಾರು ಪತ್ರ 2011ನೇ ಇಸವಿ 3ನೇ ತಿಂಗಳು ಆಗಿದೆ, ತಾರೀಖು ನೆನಪಿಲ್ಲ, ಖರೀದಿ ಕರಾರು ಪತ್ರ ಆಗುವುದಕ್ಕಿಂತ ಮೊದಲು ಮಾತುಕತೆ ಆಗಿತ್ತೋ ಹೇಗೋ ನನಗೆ ಗೊತ್ತಿಲ್ಲ, ನನಗೆ ಪ್ರತಿವಾದಿ ಸಂಬಂಧಿಕನಲ್ಲ, ವಾದಿ ಮತ್ತು ಪ್ರತಿವಾದಿ ಇಬ್ಬರೂ ನನಗೆ ಪರಿಚಯಸ್ಥರು. ಖರೀದಿ ಕರಾರು ಪತ್ರದ ಮಾತುಕತೆಯಲ್ಲಿ ನಾನು ಭಾಗವಹಿಸಿಲ್ಲ ಎಂದರೆ ಸರಿ.

**8)** ಖರೀದಿ ಕರಾರು ಪತ್ರದ ಪ್ರಕಾರ 12 ರಿಂದ 15 ಎಕರೆ 9 ಐಟಂ ಜಮೀನುಗಳು ಬರೆದಿರಬಹುದು. ಖರೀದಿ ಕರಾರು ಪತ್ರದಲ್ಲಿ ನಿಖರವಾಗಿ ಎಷ್ಟು ಎಕರೆ ಜಮೀನು ಹಾಗೂ ಎಷ್ಟು ಐಟಂ ಜಮೀನುಗಳು ಬರೆಯಲಾಗಿದೆ ಎಂದು ನಾನು ನೋಡಿಲ್ಲ, ಆದರೆ ಪಕ್ಷಗಾರರೇ ಓದಿ ನನಗೆ ತಿಳಿಸಿದ್ದಾರೆ. ಆ ದಿನ ನನಗೆ ಸಹಿ ಮಾಡಲು ಹೇಳಿದ ಕಾರಣ ನಾನು ಸಹಿ ಮಾಡಿದ್ದೇನೆಂದರೆ ಸರಿ.

**9)** ಖರೀದಿ ಕರಾರು ಪತ್ರ ಆದ ದಿನ ಒಟ್ಟು ಕ್ರಯದ ನಿಷ್ಕರ್ಶ ಮೊತ್ತ 10,00,000/- ಪೈಕಿ 9,00,000/- ರೂಪಾಯಿ ಹಣವನ್ನು ವಾದಿ ಪ್ರತಿವಾದಿಗೆ ಕೊಟ್ಟಿದ್ದಾನೆ, ಉಳಿದ 1,00,000/- ರೂಪಾಯಿ ಹಣವನ್ನು ಪ್ರತಿವಾದಿ ಕೆಲವು

ದಾಖಲೆಗಳನ್ನು ತಯಾರು ಮಾಡಿಸಿದ ಬಳಿಕ ಕೊಡಲು ಒಪ್ಪಲಾಯಿತು. ವಾದಿ ಹಣವನ್ನು ಪ್ರತಿವಾದಿಗೆ ನೀಡಿದ್ದಾನೆ. ಆ ದಿನ 500 ಮತ್ತು 1,000/- ರೂಪಾಯಿ ಮುಖಬೆಲೆಯ ನೋಟುಗಳನ್ನು ವಾದಿ ಪ್ರತಿವಾದಿಗೆ ನೀಡಿದ್ದಾರೆ. ಸದರಿ ವ್ಯವಹಾರ ತಾಲ್ಲೂಕು ಕಛೇರಿಯ ಹಿಂಭಾಗದಲ್ಲಿ ಆಗಿದೆ.

**10)** ವಾದಿ 9,00,000/- ರೂಪಾಯಿ ಹಣವನ್ನು ಎಲ್ಲಿಂದ ತಂದ ಎಂದು ನಾನು ವಿಚಾರಿಸಿಲ್ಲ. ನಾನು ತಾಲ್ಲೂಕು ಕಛೇರಿಗೆ ಬರುವಷ್ಟರಲ್ಲಿ ಖರೀದಿ ಕರಾರು ಪತ್ರ ತಯಾರಾಗಿತ್ತು, ನಂತರ ವಾದಿ ಮತ್ತು ಪ್ರತಿವಾದಿಯರು ನನಗೆ ವಿಷಯ ತಿಳಿಸಿದ ನಂತರ ನಾನು ಸಹಿ ಮಾಡಿದ್ದೇನೆ. ವಾದಿ ಮತ್ತು ಪ್ರತಿವಾದಿ ಕೂಡಿ ಖರೀದಿ ಕರಾರು ಪತ್ರ ತಯಾರು ಮಾಡಿದ್ದಾರೆ. ಖರೀದಿ ಕರಾರು ಪತ್ರದ ಸ್ಟ್ಯಾಂಪ್ ಪೇಪರ್‌ನ್ನು ಯಾರು ಯಾವ ಊರಿನಿಂದ ತಂದಿದ್ದರು ನಾನು ನೋಡಿಲ್ಲ.

**11)** ಆ ದಿನ ಮಧ್ಯಾಹ್ನ 3.30 ಗಂಟೆವರೆಗೂ ಖರೀದಿ ಕರಾರು ಪತ್ರಕ್ಕೆ ನಾವೆಲ್ಲರೂ ಸಹಿ ಮಾಡಿದ್ದೇವೆ. ನಿ.ಪಿ.10 ಖರೀದಿ ಕರಾರು ಪತ್ರವನ್ನು ನಾನು ಮೊದಲಿಗೆ ತಾಲ್ಲೂಕು ಕಛೇರಿಯಲ್ಲಿ ನೋಡಿದ್ದೇನೆ. ನಿ.ಪಿ.10 ದಾಖಲೆಗೆ ನಾನು ಸಹಿ ಮಾಡುವುದಕ್ಕಿಂತ ಮೊದಲು ಪ್ರತಿವಾದಿ ಸಹಿ ಮಾಡಿರುತ್ತಾನೆ. ನಾನು ಸ್ಥಳಕ್ಕೆ ಹೋದ ಬಳಿಕ ಪ್ರತಿವಾದಿ ಸಹಿ ಮಾಡಿದ್ದಾನೆ.

**12)** ಖರೀದಿ ಕರಾರು ಪತ್ರದ ಆಸ್ತಿಗಳು 2011ನೇ ಇಸವಿಯಲ್ಲಿ ಸುಮಾರು 80 ರಿಂದ 90 ಲಕ್ಷ ರೂಪಾಯಿ ಬೆಳೆ ಬಾಳುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ.

ಕೋನಂಪಲ್ಲಿ, ನಾಯನಹಳ್ಳಿ ಕಡೆ 2011ನೇ ಇಸವಿಯಲ್ಲಿ ಪ್ರತಿಎಕರೆ 5 ರಿಂದ 6 ಲಕ್ಷ ರೂಪಾಯಿ ಬೆಲೆ ಇತ್ತು ಎಂದರೆ ಸರಿಯಲ್ಲ. 2011ನೇ ಇಸವಿಯಲ್ಲಿ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ಅವಶ್ಯಕತೆ ಇದ್ದಿರಬಹುದು, ಆದರೆ ಆ ಬಗ್ಗೆ ನಿಖರವಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**13)** ದಾವಾ ಆಸ್ತಿಗಳು ಪ್ರತಿವಾದಿಗೆ ಹೇಗೆ ಬಂದವು ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿ ವಾದಿಯ ಹೆಸರಿನಲ್ಲಿ ಯಾವುದೇ ಖರೀದಿ ಕರಾರು ಪತ್ರ ಬರೆದುಕೊಟ್ಟಿಲ್ಲ ಮತ್ತು ಯಾವುದೇ ಆಸ್ತಿಗಳನ್ನು ಮಾರಾಟ ಮಾಡಲು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ವಿಸ್ತೀರ್ಣ ಮತ್ತು ಚೆಕ್‌ಬಂದಿ ಮತ್ತು ಸರ್ವೆ ನಂಬರ್ ನನಗೆ ಹೇಳಲು ಆಗುವುದಿಲ್ಲ, ಕಾರಣ ಬಹಳ ವರ್ಷವಾಗಿದೆ.

**14)** ದಾವಾ ಆಸ್ತಿಗಳ ಪೈಕಿ ಕೆಲವು ಆಸ್ತಿಗಳ ಪಹಣಿ ಪತ್ರಿಕೆ ನಾನು ನೋಡಿದ್ದೇನೆ, ಅದರಲ್ಲಿ ಪ್ರತಿವಾದಿ ಹೆಸರಿತ್ತು, ಉಳಿದ ದಾಖಲೆಗಳನ್ನು ನಾನು ನೋಡಿಲ್ಲ. ವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಳ್ಳುವ ಬದಲು ಕ್ರಯಪತ್ರ ಮಾಡಿಕೊಳ್ಳಲು ಏನಾದರೂ ತೊಂದರೆ ಇತ್ತೋ ಹೇಗೋ ನನಗೆ ಗೊತ್ತಿಲ್ಲ. ಖರೀದಿ ಕರಾರು ಪತ್ರದಲ್ಲಿರುವ ಷರತ್ತುಗಳನ್ನು ನನಗೆ ಓದಿ ಹೇಳಿದ್ದರು, ಆದರೆ ಈಗ ನನಗೆ ನೆನಪಿಲ್ಲ.

**15)** ಖರೀದಿ ಕರಾರು ಪತ್ರಕ್ಕೆ ನನ್ನ ಜೊತೆ ಒಬ್ಬ ಗೋವಿಂದ ಮತ್ತು ಪತ್ರ ಬರಹಗಾರರು ಸಹಿ ಮಾಡಿದ್ದಾರೆ. ಪತ್ರ ಬರಹಗಾರರ ಹೆಸರು ನಾಗರಾಜು. ಆತನ ಊರು ನನಗೆ ಗೊತ್ತಿಲ್ಲ. ಖರೀದಿ ಕರಾರು ಪತ್ರ ಸುಮಾರು 5-6 ಪುಟದಲ್ಲಿದೆ. ದಾವಾ ಆಸ್ತಿಗಳು ಪ್ರತಿವಾದಿಯ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ.

**16)** ನಿ.ಪಿ.10 ದಾಖಲೆಯನ್ನು ವಾದಿ, ನಾನು ಮತ್ತು ಗೋವಿಂದ ಶಾಮೀಲಾಗಿ ಸೃಷ್ಟಿಸಿ ಈ ದಾವೆಯನ್ನು ಹೂಡಲಾಗಿದೆ ಎಂದರೆ ಸರಿಯಲ್ಲ. ನಿ.ಪಿ.10 ದಾಖಲೆಗೆ ಪ್ರತಿವಾದಿ ಸಹಿ ಮಾಡಿರುವುದಿಲ್ಲ, ಸದರಿ ಸಹಿಯನ್ನು ನಾವುಗಳು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆ ದಿನ ವಾದಿ ಪ್ರತಿವಾದಿಗೆ ಯಾವುದೇ ಹಣ ನೀಡಿಲ್ಲ ಮತ್ತು ಆ ದಿನ ಪ್ರತಿವಾದಿ ಆ ಸ್ಥಳಕ್ಕೆ ಬಂದೇ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ನನ್ನ ಪರಿಚಯವಿಲ್ಲ, ಆದ್ದರಿಂದ ಆತ ನನ್ನನ್ನು ಯಾವತ್ತೂ ಕರೆದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**